ಅ) ರಾಜ್ಯಕ್ಕೆ ಸಾಕಾಗುವಷ್ಟು ಬಿತ್ತನೆ ಗೂಡನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

ಇ) ಇತ್ತೀಚೆಗೆ ರೇಷ್ಮೆ ಬೆಳೆಗೆ ಗಂಟುರೋಗ ಸುಣ್ಣಕಟ್ಟು ರೋಗಗಳು ವ್ಯಾಪಕವಾಗಿ ತಗಲುತ್ತಿರುವುದರಿಂದ ಇವುಗಳನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ಮೈಸೂರು ತಳಿ : ಕುಣಿಗಲ್ ತಾಲ್ಲೂಕು, ಹೆಬ್ಬೂರು ಹೋಬಳಿ, ತುಮಕೂರು - ತಾಲ್ಲೂಕು ತುಮಕೂರು - ಜಿಲ್ಲೆ, ಮಾಗಡಿ - ತಾಲ್ಲೂಕು ಬೆಂಗಳೂರು - ಜಿಲ್ಲೆ.

ಬೈವೋಲ್ಟಿನ್ ತಳಿ : ಆನೇಕಲ್ ತಾಲ್ಲೂಕು ಬೆಂಗಳೂರು ಜಿಲ್ಲೆ, ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ ಮತ್ತು ಈ ಕೆಳಕಂಡ ತಾಲ್ಲೂಕುಗಳು: 1.ಮಡಿಕೇರಿ 2. ಸೋಮವಾರ ಪೇಟೆ 3. ವಿರಾಜ ಪೇಟೆ 4. ಸುಳ್ಯ 5.ಹಾಸನ 6.ಆಲೂರು 7. ಬೇಲೂರು 8. ಸಕಲೇಶಪುರ 9. ಚಿಕ್ಕಮಗಳೂರು 10. ಮೂಡಿಗೆರೆ 11. ಶೃಂಗೇರಿ 12. ಕೊಪ್ಪ 13. ನರಸಿಂಹರಾಜಪುರ 14. ಶಿವಮೊಗ್ಗ 15. ಸಾಗರ 16. ಹೊಸನಗರ 17. ತೀರ್ಥಹಳ್ಳಿ 18. ಶಿಕಾರಿಪುರ 19. ಕಾರವಾರ 20. ಯಲ್ಲಾಪುರ 21 .ಅಂಕೋಲ (ಸೂಪ) 22. ಸಿರ್ಸಿ 23. ಕುಮಟ 24. ಸಿದ್ದಾಪುರ25. ಹೊನ್ನಾವರ 26. ಬಟ್ಕಳ 27.ಧಾರವಾಡ 28. ಬೆಳಗಾಂ 29. ಖಾನಾಪುರ 30. ಹುಕ್ಕೇರಿ 31. ಬೈಲಹೊಂಗಲ 32. ಸೌದತ್ತಿ.

ಆ) ಪಿ4, ಪಿ3, ಪಿ2 ಸರ್ಕಾರಿ ಫಾರಂಗಳಲ್ಲಿ ಉತ್ಪನ್ನ ಮಾಡುವುದು. ಪಿ2 ಸ್ವಲ್ಪ ಭಾಗವನ್ನು ಬಿತ್ತನೆ ವಲಯದಲ್ಲಿ ಆಯ್ಕೆ ಮಾಡಿದ ರೈತರಿಂದ ಉತ್ಪಾದಿಸುವುದು. ಪಿ4 ಮತ್ತು ಪಿ3 ಗುಣ ಮಟ್ಟವನ್ನು ಕಾಪಾಡಲು ಒಂದೊಂದೇ ಲೇಯಿಂಗನ್ನು (ಮೊಟ್ಟೆ) ಪ್ರತ್ಯೇಕವಾಗ ಸಾಕಿ ಉತ್ತಮ ಗೂಡುಗಳನ್ನು ಆಯ್ಕೆ ಮಾಡಿ ಮುಂದಿನ ಸಂತತಿಗೆ ಉಪಯೋಗಿಸುವುದು. ಪಿ2 ಎರಡೆರೆಡು ಲೇಯಿಂಗ್‌ಗಳನ್ನು ಪ್ರತ್ಯೇಕವಾಗಿ ಸಾಕಿ, ಗುಣಮಟ್ಟದ ಗೂಡುಗಳನ್ನು ಆಯ್ಕೆ ಮಾಡಿ ಮುಂದಿನ ಸಂತತಿಗೆ ಉಪಯೋಗಿಸುವುದು. ಪಿಗ ಗೂಡಿನ ಉತ್ಪನ್ನಕ್ಕೆ ಸಾಕಷ್ಟು ತಾಂತ್ರಿಕ ಸಲಹೆಗಳನ್ನು ಕೊಟ್ಟು ರೋಗಗಳನ್ನು ನಿಯಂತ್ರಿಸಿ ಗುಣಮಟ್ಟದ ಗೂಡುಗಳನ್ನು ಉತ್ಪನ್ನ ಮಾಡುವುದು ಬೆಳೆಯಲ್ಲಿ ರೋಗವೇನಾದರೂ ಕಂಡುಬಂದರೆ ಅಂತ ಬೆಳೆಯಿಂದ ಬಂದಂತಹ ಗೂಡುಗಳನ್ನು ನೂಲು ಬಿಚ್ಚಾಣಿಕೆಗೆ ಕೊಡುವುದು.

ಇ) ರೋಗಗಳನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳು:

1. ಫಾರ್ಮಲಿನ್ ದ್ರಾವಣ ಸಿಂಪರಣೆ ಮಾಡುವುದು.
2. ಚಿಟ್ಟೆ ಪರೀಕ್ಷೆ ತೀವ್ರಗೊಳಿಸುವುದು.
3. ರೋಗ ನಿರೋಧಕ ಔಷಧಿಗಳನ್ನು ಉಪಯೋಗಿಸುವುದು.

ಮೈಸೂರು ಭಿತ್ತನೆ ವಲಯದಲ್ಲಿ 1990-91ನೇ ಸಾಲಿನಲ್ಲಿ ಜನವರಿ ಅಂತ್ಯದವರೆಗೆ ಎಲ್ಲಾ ರೈತರ ಮನೆಗಳಿಗೆ ಇಲಾಖಾವತಿಯಿಂದ ಸೊಂಕು ನಿವಾರಣೆ ಕಾರ್ಯ ಕೈಗೊಂಡಿದ್ದು 186 ಟನ್ ಫಾರ್ಮಲಿನ್ ದ್ರಾವಣವನ್ನು ಹಾಗೂ 4 ಟನ್ ಬ್ಲೀಚಿಂಗ್ ಪೌಡರನ್ನು ಉಪಯೋಗಿಸಲಾಗಿದೆ.

ರೇಷ್ಮೆ ಅಭಿವೃದ್ಧಿ ಬಗ್ಗೆ.

613 - ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

1. ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಯ ಪ್ರಗತಿ ಯಾವ ರೀತಿ ಮುಂದುವರೆದಿದೆ (ಕಾರ್ಯಕ್ರಮಗಳ ವಿವರ ಒದಗಿಸುವುದು)

2. *ವಿಶ್ವಬ್ಯಾಂಕಿನ ನೆರವಿನಿಂದ ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ಅನುಕೂಲಗಳಾವುವು?*

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯಸಚಿವರು) :

1. ಏಪ್ರಿಲ್ 1989 ರಿಂದ ಯೋಜನೆಯನ್ನು ಆಚರಣೆಗೆ ತರಲಾಗಿದೆ.

1989-90ಮತ್ತು 1990-91ರ ಅಂತ್ಯದಲ್ಲಿ 4,550ಹೆಕ್ಟೇರು ಪ್ರದೇಶವನ್ನು ಹಿಪ್ಪನೇರಳೆ ವ್ಯವಸಾಯಕ್ಕೆ ಅಳವಡಿಸುವ ಗುರಿ ಇದ್ದು ಜನವರಿ 1991ರ ಅಂತ್ಯದವರೆವಿಗೆ 8,500 ಹೆಕ್ಟೇರ್ ಪ್ರದೇಶ ಹಿಪ್ಪನೇರಳೆ ವ್ಯವಸಾಯಕ್ಕೆ ಅಳವಡಿಸಲಾಗಿದೆ. ರೇಷ್ಮೆ ಉತ್ಪನ್ನ 659 ಮೆ.ಟನ್‌ಗಳಷ್ಟು ಜಾಸ್ತಿಯಾಗಿದೆ. ಗೈನೇಜ್ ಕಟ್ಟಡದ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲಾಗಿದೆ.

ಇವುಗಳು ಪೂರ್ಣಗೊಂಡ ನಂತರ ಪಿ1 ಮತ್ತು ಪಿ2 ಗೂಡಿನ ಗುಣಮಟ್ಟ ಇನ್ನೂ ಹೆಚ್ಚಿನ ರೀತಿಯಲ್ಲಿ ಸುಧಾರಿಸುವುದು. 6 ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ಕಟ್ಟಬೇಕಾಗಿದ್ದು ಈಗಾಗಲೇ ಒಂದು ಮಾರುಕಟ್ಟೆ ಕಟ್ಟಡ ಕಟ್ಟುವ ಕಾರ್ಯ ಕೈಗೊಳ್ಳಲಾಗಿದೆ.

ನೂಲು ಬಿಚ್ಚಾಣಿಕೆಯಲ್ಲಿ ತರಬೇತಿ ನೀಡಲು ಹಾಗೂ ಮಹಿಳೆಯರಿಗೆ ತರಬೇತಿ ನೀಡಲು ಬೇಕಾದ ಸೌಕರ್ಯಗಳನ್ನು 4 ತರಬೇತಿ ಶಾಲೆಗಳಲ್ಲಿ ಕಲ್ಪಿಸುವ ಕಾರ್ಯ ಕೈಗೊಳ್ಳಲಾಗಿದೆ.

ಉತ್ತಮ ದರ್ಜೆಯ ಪಿ1 ಮೊಟ್ಟೆಗಳನ್ನು ಉತ್ಪನ್ನ ಮಾಡಲು ಬೇಕಾದ 8 ಗೈನೇಜುಗಳ ಸ್ಥಾಪನೆ ಕೈಗೊಳ್ಳಲಾಗಿದೆ.

ರೈತರಿಗೆ ಇದುವರೆವಿಗೂ ಕೊಟ್ಟಿರುವ ಸಾಲ ಇಂತಿದೆ:

	ಸಂಖ್ಯೆ:	ರೂ. *(ಲಕ್ಷಗಳಲ್ಲಿ)*
1. ಕಡ್ಡಿ ನಾಟಿ ಮಾಡಲು	–3654	106.548
2. ಹುಳು ಸಾಕಣೆ ಉಪಕರಣ	–3544	139.314
3. ಮನೆಕಟ್ಟಲು	-1542	240.69
4. ಬಾವಿಗೆ	-01	0.250
5. ಚರಕಗಳಿಗೆ	-100	13.327
6. ಕಾಟೇಜ್ ಬೇಸಿನ್	-26	1.950
7. ಹುರಿ ಘಟಕ	- 40	86.61
8. ಮಗ್ಗಗಳು	-60	65.425

2 ವಿಶ್ವಬ್ಯಾಂಕ್ ನೆರವಿಂದ ರೇಷ್ಮೆ ಬೆಳೆಗಾರನಿಗೆ ಆಗುತ್ತಿರುವ ನೆರವುಗಳು

1. ರೇಷ್ಮೆ ಗೂಡಿನ ಇಳುವರಿ ಜಾಸ್ತಿಯಾಗಿರುವುದು ಹಾಗೂ ಅವರು ಗುಣಮಟ್ಟದಲ್ಲಿ ಸುಧಾರಣೆಯಾಗಿರುವುದು.
2. ಸಕಾಲದಲ್ಲಿ ತಾಂತ್ರಿಕ ಸಲಹೆ ದೊರೆಯುವುದು.
3. ಬಾಕಿ ಹುಳುಗಳನ್ನು ವೈಜ್ಞಾನಿಕವಾಗಿ ಸಾಕಣೆ ಮಾಡುವುದು.
4. ಹೆಚ್ಚಿನ ಇಳುವರಿ ಕೊಡತಕ್ಕಂತಹ ಹಿಪ್ಪನೇರಳೆ ತಳಿ ಹಾಗೂ ರೇಷ್ಮೆ ಹುಳು ತಳಿ ದೊರೆಯುವುದು.
5. ಉತ್ಪಾದಿಸಿದ ಗೂಡಿನ ಮಾರಾಟಕ್ಕೆ ವ್ಯವಸ್ಥೆ ದೊರೆಯುವುದು.

6. ಕಡ್ಡಿ ನಾಟಿ ಮಾಡಲು ಹುಳು ಸಾಕಣೆ ಉಪಕರಣಗಳನ್ನು ಕೊಳ್ಳಲು, ಹುಳು ಸಾಕಣೆ ಮನೆ ಕಟ್ಟಲು ಮತ್ತು ಬಾವಿ ತೋಡಿ ಪಂಪ್‌ಸೆಂಟ್ ಅಳವಡಿಸಲು ಸಾಲ ಸೌಲಭ್ಯ ದೊರೆಯುವುದು.

ಜೋಡಿ ರಸ್ತೆ ನಿರ್ಮಾಣದ ಬಗ್ಗೆ

615 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅತಿ ಹೆಚ್ಚು ಪ್ರಯಾಣಕರು ಓಡಾಡುವ ಮೈಸೂರು-ಬೆಂಗಳೂರು ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾಡುವುದಕ್ಕೆ ಸರ್ಕಾರ ನಿರ್ಧರಿಸಿದೆಯೆ?

ಆ) ಈಗ ಇರುವ ಈ ರಸ್ತೆಯಲ್ಲಿ ಪ್ರತಿದಿನ ವಾಹನ ಅಪಘಾತಗಳು ಆಗುತ್ತಿರುವುದನ್ನು ತಡೆಗಟ್ಟಲು ಆದಷ್ಟು ಬೇಗ ಜೋಡಿ ರಸ್ತೆ ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಇಲ್ಲ

ಆ) ಸಾಧ್ಯವಾದಷು ರಸ್ತೆ ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ. ಬೆಂಗಳೂರು-ಮೈಸೂರು ಮಧ್ಯೆ ಪ್ರತ್ಯೇಕ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಮಾಡುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಾಜಶ್ರೀ ಕಾರ್ಖಾನೆಯ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡದ ಬಗ್ಗೆ ಕುರಿತು

595 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಾಜಶ್ರೀ ಸಿಮೆಂಟ್ ಕಾರ್ಖಾನೆ ಹಾಗೂ ವಾಸವದತ್ ಸೇಡಂ ಇತ್ಯಾದಿ ಕಾರ್ಖಾನೆಗಳವರು ಆ ಭಾಗದವರಿಗೆ ಉದ್ಯೋಗವಕಾಶವನ್ನು ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಇ) ರಾಜಶ್ರೀ ಸಿಮೆಂಟ್ ಕಾರ್ಖಾನೆಯವರು 2ನೇ ಘಟಕಕ್ಕಾಗಿ ಪರಿಣಿತ ಮತ್ತು ಅಪರಿಣಿತ (ಸ್ಕಿಲ್ಡ್ ಮತ್ತು ಅನ್‌ಸ್ಕಿಲ್ಡ್) ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವ ಬಗ್ಗೆ ಸ್ಥಳೀಯವರಿಗೆ ಅವಕಾಶ ಕೊಡದೆ ನೇಮಕಾತಿಗಳನ್ನು ಮಾಡಿಕೊಂಡ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಈ) ಇಂತಹ ಕಾರ್ಖಾನೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಒಂದು ಸಮಿತಿಯನ್ನು ರಚಿಸಲು ಶಾಸಕರಿಂದ ಸಲಹೆಗಳೇನಾದರೂ ಬಂದಿವೆಯೆ, ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಉ) ಈಗಲಾದರೂ ಸಹ ಈ ಕಾರ್ಖಾನೆಗಳಲ್ಲಿ ನೇಮಕಾತಿಗಾಗಿ ನೇಮಕಾತಿ ಸಮಿತಿಯನ್ನು ರಚಿಸಬಹುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಈ ಬಗ್ಗೆ ಪ್ರಧಾನ ವ್ಯವಸ್ಥಾಪಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಗುಲ್ಬರ್ಗಾ ಇವರಿಂದ ವರದಿ ಕೋರಲಾಗಿದೆ. ವರದಿ ಬಂದನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.